**ಅಸಲು ದಾವಾ ಸಂಖ್ಯೆ: 181/2014** **ಡಿ.ಡಬ್ಲ್ಯೂ.:- 1**

ದಿನಾಂಕ: **11-06-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-

ಈ ದಾವೆಯ ಕೌಂಟರ್ ಕ್ಲೈಮ್ ನಲ್ಲಿ ನಾವು ಏನು ಪರಿಹಾರ ಕೇಳಿದ್ದೇವೆ ಎಂದು ನನಗೆ ಗೊತ್ತು. ಕೌಂಟರ್ ಕ್ಲೈಮ್ ನಲ್ಲಿ ಸರ್ವೇ ನಂ.67/4 ರ ಜಮೀನಿನಲ್ಲಿ 1 ಎಕರೆ 8 ಗುಂಟೆ ಜಮೀನಿನ ಚಕ್ಕುಬಂಧಿ ಪೂರ್ವಕ್ಕೆ ಚನ್ನಬಸಪ್ಪ ರವರ ಜಮೀನು, ಪಶ್ಚಿಮಕ್ಕೆ ಬಸವರಾಜಪ್ಪರವರ ಜಮೀನು, ಉತ್ತರಕ್ಕೆ ಹಾಲಪ್ಪರವರ ಜಮೀನು, ದಕ್ಷಿಣಕ್ಕೆ ರವಿ ರವರಿಗೆ ಸೇರಿದ ಜಮೀನು ಇರುತ್ತದೆ. ಸರ್ವೇ ನಂ.67/4 ರ ಜಮೀನಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾವು ಸಲ್ಲಿಸಿದ ದಾಖಲೆಯಲ್ಲಿ ಸರ್ವೇ ನಂ.67/4 ರ ಜಮೀನಿಗೆ ಸಂಬಂಧಪಟ್ಟಂತೆ ನನ್ನ ಹೆಸರಿನಲ್ಲಾಗಲೀ ಅಥವಾ ನನ್ನ ತಂದೆಯ ಹೆಸರಿನಲ್ಲಾಗಲೀ ನಮೂದಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಯಾದ ವೀರಪ್ಪ ತಂದೆ ರುದ್ರಪ್ಪರವರ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ವೀರಪ್ಪ ಬಿನ್ ರುದ್ರಪ್ಪರವರು ನನ್ನ ದೊಡ್ಡಪ್ಪ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯು ವಾದಿಯ ತಾಯಿಯಾದ ಶಾಂತಮ್ಮನ ಸ್ವಯಾರ್ಜಿತ ಆಸ್ತಿ ಆಗಿದ್ದು ವಾದಿಯ ತಾಯಿ ಶಾಂತಮ್ಮ ತೀರಿಕೊಂಡ ನಂತರ ವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೌಂಟರ್ ಕ್ಲೈಮ್ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಕೌಂಟರ್ ಕ್ಲೈಮ್ ನಲ್ಲಿ ನಮೂದಾಗಿರುವ ವಿಚಾರಗಳು ಶುದ್ಧ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ವೀರಪ್ಪ ಬಿನ್ ರುದ್ರಪ್ಪರವರಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವೀರಪ್ಪರವರು ನಮ್ಮ ಕುಟುಂಬದ ಸದಸ್ಯರಲ್ಲ, ನಮಗೂ ಅವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ಕೌಂಟರ್ ಕ್ಲೈಮ್ ನಲ್ಲಿ ನಮೂದಾಗಿರುವ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕೌಂಟರ್ ಕ್ಲೈಮ್ ನಲ್ಲಿ ನಮೂದಾಗಿರುವ ಆಸ್ತಿಯಲ್ಲಿ ನಾನು

ಯಾವತ್ತೂ ಸ್ವಾಧೀನಾನುಭವದಲಿಲ್ಲ ಆದ ಕಾರಣ ನಾನು ಕಾನೂನಿನ ಅಡಿಯಲ್ಲಿ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. 2014 ನೇ ಸಾಲಿನಲ್ಲಿ ವಾದಿಗಳ ದಾವಾ ಆಸ್ತಿಗೆ ನಾವು ತೊಂದರೆಯನ್ನು ಕೊಟ್ಟಿದ್ದರಿಂದ ವಾದಿಗಳು ನಮ್ಮ ವಿರುದ್ಧ ಶಾಶ್ವತ ನಿರ್ಬಂದಾಜ್ಞೆಯನ್ನು ಕೋರಿ ದಾವೆಯನ್ನು ಸಲ್ಲಿಸಿದ ಸುಮಾರು ವರ್ಷಗಳ ನಂತರ ವಾದಿಯವರಿಗೆ ತೊಂದರೆ ಕೊಡಲು ಸುಳ್ಳು ಕೌಂಟರ್ ಕ್ಲೈಮ್ ಅನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.